**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.490/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ತಾಮಸ್ | ಪ್ರಾ.ಸಾ -2 |
| ತಂದೆಯ ಹೆಸರು | ಃ ಮಾರ್ಕ್ ರೆಡ್ಡಿ | ಚಾಸಾ-2 |
| ವಯಸ್ಸು | ಃ 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ಕೂಲಿ | ದಿನಾಂಕಃ12.02.2024. |
| ವಾಸಸ್ಥಳ | ಃ ಮೇಲೆ ಮರಸಣಿಗೆ | |

**ಃಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದಃ**

ಚಾಸಾ-1 ನನ್ನ ಹೆಂಡತಿ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಮೊದಲು ಪರಿಚಯ ಇದ್ದರು. ಚಾಸಾ-7 ರವರು ನಮ್ಮ ರೂಮಿನ ಪಕ್ಕದಲ್ಲಿ ವಾಸವಿದ್ದರು. ನಾನು ಚಾಸಾ-8 ರವರ ತೋಟದಲ್ಲಿ ಕೆಲಸ ಮಾಡುತ್ತೇನೆ.

1 ವರ್ಷದ ಹಿಂದೆ ಕುಡಿಯಲು ನೀರು ತರಲು ನಮ್ಮ ಲೈನ್ ನ ಕೆಳಗೆ ಇರುವ ಮತ್ತೊಂದು ಲೈನ್ ಬಳಿ ಹೋಗಿದ್ದೆ. ಅಲ್ಲಿ ಆರೋಪಿಯು ಸ್ನಾನದ ನೀರಿಗಾಗಿ ಬಕೇಟ್ ಇಟ್ಟಿದ್ದರು. ಆರೋಪಿಯು ನನಗೆ ಬೋಳಿಮಗ, ಸೂಳೆಮಗ ಎಂದು ಬೈದು ಕತ್ತಿಯಿಂದ ಮೊದಲು ನನ್ನ ತಲೆಗೆ ಹೊಡೆದರು. ನಾನು ಪ್ರಜ್ಞೆ ತಪ್ಪಿ ಬಿದ್ದಾಗ ಅವರು ನನ್ನ ಮೂಗು ಬಾಯಿಗೆ ಕತ್ತಿಯಿಂದ ಹೊಡೆದಿದ್ದಾರೆ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ನನಗೆ ಪ್ರಜ್ಞೆ ಬಂದಾಗ ನಾನು ಕಳಸ ಆಸ್ಪತ್ರೆಯಲ್ಲಿ ಇದ್ದೆ. ನಂತರ ಅಲ್ಲಿಂದ ಚಿಕ್ಕಮಗಳೂರು ಆಸ್ಪತ್ರೆಗೆ ಕಳುಹಿಸಿದ್ದಾರೆ. ಆ ಆಸ್ಪತ್ರೆಯಲ್ಲಿ 11 ದಿನಗಳ ಕಾಲ ಚಿಕಿತ್ಸೆ ಪಡೆದಿದ್ದೇನೆ. ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ಬಂದು ನನ್ನ ಬಟ್ಟೆಗಳು, ರಕ್ತದ ಮಾದರಿ ತೆಗೆದುಕೊಂಡು ಫೋಟೋ ತೆಗೆದಿದ್ದಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎರಡು ಪ್ಲಾಸ್ಟಿಕ್ ಬಾಕ್ಸಗಳನ್ನು ನೋಡಿ ಅದರಲ್ಲಿರುವುದು ಟೀ-ಶರ್ಟ್ ಮತ್ತು ಚೆಡ್ಡಿ ಎಂದು ಗುರುತಿಸಿರುತ್ತಾರೆ. ಮುಂದುವರೆದು ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಕತ್ತಿಯನ್ನು ನೋಡಿ ಅದರಲ್ಲಿಯೇ ಆರೋಪಿ ನನಗೆ ಹಲ್ಲೆ ಮಾಡಿರುವುದಾಗಿ ಗುರುತಿಸಿರುತ್ತಾರೆ. ಟೀ-ಶರ್ಟ್ ಇರುವ ಪ್ಲಾಸ್ಟಿಕ್ ಬಾಕ್ಸ್ ನ್ನು ಎಂ.ಓ.1, ಚಡ್ಡಿ ಇರುವ ಪ್ಲಾಸ್ಟಿಕ್ ಬಾಕ್ಸ್ ನ್ನು ಎಂ.ಓ.2, ಕತ್ತಿಯನ್ನು ಎಂ.ಓ.3 ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಭಾವಚಿತ್ರವನ್ನು ನೋಡಿ ಅದು ತಮಗೆ ಆದ ಗಾಯಗಳ ಸಂಬಂಧ ಆದ ತೆಗೆದ ಭಾವಚಿತ್ರ ಎಂದು ಗುರುತಿಸುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು. ಆ ದಿನ ನನಗೆ ಕತ್ತಿಯಿಂದ ಹಲ್ಲೆ ಮಾಡಿ ಬೈದಿರುವ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯೇ ಆಗಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ**

ನಾನು ಮತ್ತು ಆರೋಪಿ ಸ್ನೇಹಿತರಾಗಿದ್ದೆವು ಎಂದರೆ ಸರಿ. ನಾವಿಬ್ಬರು ಚಾಸಾ-8 ರವರ ತೋಟದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ಕೆಲಸ ಮಾಡುವಾಗ ನಾನು ಮತ್ತು ಆರೋಪಿ ಸಣ್ಣ ಪುಟ್ಟ ಗಲಾಟೆ ಮಾಡಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳಲಾದ ದಿನಾಂಕ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಹೇಳಿದ ಸ್ಥಳದ ಪಕ್ಕದಲ್ಲಿಯೇ ಚಾಸಾ-8 ರವರ ಮನೆ ಇದೆ ಎಂದರೆ ಸರಿ. ಆ ಸ್ಥಳದ ಬಲಕ್ಕೆ ಚಾಸಾ-7 ರವರ ಅಂಗಡಿ ಇದೆ ಎಂದರೆ ಸರಿ. ನಾನು ನೀರು ತರಲು ಹೋಗಿದ್ದೆ ಎಂದು ಹೇಳಿದ್ದ ಸ್ಥಳದಲ್ಲಿ ಗಲಾಟೆಯಾದರೆ ಚಾಸಾ-7 ಮತ್ತು 8 ರವರಿಗೆ ಕಾಣುತ್ತದೆ ಎಂದರೆ ಸರಿ. ಸಂಜೆ ಸಮಯಕ್ಕೆ ಚಾಸಾ-7 ರವರ ಅಂಗಡಿಯ ಬಳಿ ಜನರು ಇರುತ್ತಾರೆ ಎಂದರೆ ಸರಿ.

ನೀರು ತರಲು ಹೋಗಿದ್ದಾಗ ಸಮಯ ಸ.5.30 ರಿಂದ 6.00 ಗಂಟೆಯಾಗಿತ್ತು. ಅಲ್ಲಿ ಆರೋಪಿ ಸ್ನಾನದ ನೀರಿಗಾಗಿ ಬಕೇಟ್ ಇಟ್ಟಿದ್ದರು. ನನಗೂ ಮತ್ತು ಆರೋಪಿಗೂ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿ. ಕುಡಿದಾಗ ನಾವಿಬ್ಬರು ಜೋರು ಮಾತನಾಡುಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಮೊದಲು ತಲೆಗೆ ಕತ್ತಿಯಿಂದ ಹೊಡೆದಿದ್ದಾರೆ. ಮರಗಳನ್ನು ಹತ್ತಲು ಏಣಿ ಬಳಸುತ್ತೀರ ಎಂದರೆ ಸಾಕ್ಷಿಯು ಮೆಣಸು ಇದ್ದಾಗ ಮಾತ್ರ ಏಣಿ ಬಳಸುವುದಾಗಿ ನುಡಿಯುತ್ತಾರೆ. ಹಾಗೇ ಮರ ಹತ್ತುವಾಗ ಮುಖಅಡಿಯಾಗಿ ಬಿದ್ದ ಕಾರಣ ನನಗೆ ಗಾಯಗಳಾಗಿವೆ ಎಂದರೆ ಸರಿಯಲ್ಲ. ಮರದಿಂದ ಕೆಳಗೆ ಬಿದ್ದಿರುವ ಕಾರಣ ಚಾಸಾ-8 ರವರಿಗೆ ತೊಂದರೆಯಾಗುತ್ತದೆ ಎಂದು ನನ್ನಿಂದ ಸುಳ್ಳು ದೂರು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣ ಚಾಸಾ-8 ರವರೇ ಆಟೋ ಮಾಡಿ ನಿಮ್ಮನ್ನು ಆಸ್ಪತ್ರೆಗೆ ಕಳುಹಿಸಿದ್ದಾರೆ ಎಂದರೆ ಸಾಕ್ಷಿಯು ತಾವು ಚಾಸಾ-8 ರವರ ಬಳಿ ಕೆಲಸ ಮಾಡುತ್ತಿರುವ ಕಾರಣ ಹಾಗೂ ಆರೋಪಿಯು ಗಾಯ ಮಾಡಿರುವ ಕಾರಣ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿ ನನ್ನ ತಲೆಗೆ ಹೊಡೆದಾಗ ನಾನು ಕಿರುಚಿದ್ದು ಆಗ ಚಾಸಾ-1 ರವರು ಬಂದಿರುತ್ತಾರೆ. ನಾನು ಬಿದ್ದ ನಂತರ ಮೊದಲು ಬಂದಿದ್ದು ಚಾಸಾ-7 ರವರು. ನನಗೆ ತಲೆಗೆ ಏಟು ಬಿದ್ದ ನಂತರ ಪ್ರಜ್ಞೆ ತಪ್ಪಿದ್ದು ನಂತರ ಕಳಸ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂತು. ನನಗೆ ಪ್ರಜ್ಞೆ ಬಂದನಂತರವಷ್ಟೆ ಮೂಗು ಮತ್ತು ಬಾಯಿಗೆ ಪೆಟ್ಟಾಗಿರುವುದು ತಿಳಿಯಿತು ಎಂದರೆ ಸರಿ. ಆ ದಿನ ರಾ.9.00 ಗಂಟೆಯ ನಂತರ ಚಿಕ್ಕಮಗಳೂರಿಗೆ ಹೊರಟೆವು. ಚಿಕ್ಕಮಗಳೂರಿನ ಆಸ್ಪತ್ರೆಗೆ ಹೋಗಿ ದಾಖಲಾದ 2 ದಿನಗಳ ನಂತರ ಪೊಲಿಸರು ಬಂದಿದ್ದರು. ಪೋಲಿಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ನಾನು ಬಿದ್ದು ಪೆಟ್ಟು ಮಾಡಿಕೊಂಡ ಉದ್ದೇಶಕ್ಕಾಗಿ ಪೋಲಿಸರು ನನ್ನ ಬಟ್ಟೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಗೂ ಮಾತುಕತೆಯಾಗುತ್ತಿದ್ದ ಕಾರಣ, ನಾನು ಬಿದ್ದು ಪೆಟ್ಟು ಮಾಡಿಕೊಂಡಿದ್ದನ್ನು

ಉಪಯೋಗಿಸಿಕೊಂಡು ಚಾಸಾ-1 ರವರು ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ನೀರಿನ ವಿಚಾರವಾಗಿ ಹಾಗೂ ಬೇರೆ ಯಾವ ವಿಚಾರವಾಗಿ ವ್ಯಾಜ್ಯ ಇರಲಿಲ್ಲ ಎಂದರೆ ಸರಿಯಲ್ಲ.

ಎಂ.ಒ.3 ರಂತಹ ಕತ್ತಿ ಎಲ್ಲಾ ತೋಟಗಳಲ್ಲಿ ಇರುತ್ತದೆ ಎಂದರೆ ಸರಿ. ಎಂ.ಒ.3 ರ ಹಿಡಿಯನ್ನು ರಬ್ಬರ್ ನಿಂದ ಸುತ್ತಲಾಗಿದೆ ಎಂದರೆ ಸರಿ. ಎಂ.ಒ.3 ನ್ನು ಗುರುತಿಸಲು ಅದರ ಮೇಲೆ ಯಾವುದೇ ವಿಶೇಷ ಗುರುತು ಇಲ್ಲ. ನಾನು ಹೇಳಿದಂತೆ ನೀರು ಹಿಡಿಯಲು ಹೋಗಿಲ್ಲ ಅಲ್ಲಿ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಆದ ಮಾತುಕತೆಯ ಸೇಡಿಗಾಗಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.490/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ರತ್ನ | ಫ್ರಾಸಾ -1 |
| ಗಂಡನ ಹೆಸರು | ಃ ತಾಮಸ್ | ಚಾಸಾ-1 |
| ವಯಸ್ಸು | ಃ 60 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ಕೂಲಿ | ದಿನಾಂಕಃ12.02.2024. |
| ವಾಸಸ್ಥಳ | ಃ ಮೇಲೆ ಮರಸಣಿಗೆ | |

**ಃಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದಃ**

ಚಾಸಾ-2 ನನ್ನ ಗಂಡ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ನನಗಿಲ್ಲ ಆದರೆ ಅವರು ಚಾಸಾ-2 ರವರಿಗೆ ಬೈದು ಹೊಡೆದಿದ್ದಾರೆ.

2 ವರ್ಷದ ಹಿಂದೆ ನಾನು ಚಾಸಾ-2 ರವರಿಗೆ ನೀರು ತರಲು ಹೇಳಿದ್ದೆ. ಆಗ ಅವರು ಆರೋಪಿ ವಾಸವಿದ್ದ ಲೈನ್ ಬಳಿ ನೀರು ತರಲು ಹೋಗಿದ್ದು ಅಲ್ಲಿ ಆರೋಪಿಯು ಚಾಸಾ-2 ರವರೊಂದಿಗೆ ಜಗಳವಾಡಿ ಕತ್ತಿಯಿಂದ ಅವರ ತಲೆಗೆ ಹಿಂದೆಯಿಂದ ಹೊಡೆದು ಚಾಸಾ-2 ರವರ ಮೂಗು, ಬಾಯಿ ಮತ್ತು ತಲೆಗೆ ಗಾಯ ಮಾಡಿ ನಂತರ ಆರೋಪಿಯು ಓಡಿಹೋಗಿದ್ದಾರೆ. ನಾನು ಚಾಸಾ-2 ರವರ ಬಳಿ ಹೋದ ನಂತರ ಚಾಸಾ-7 ರವರು ಅಲ್ಲಿಗೆ ಬಂದು ರಕ್ತ ನಿಲ್ಲಿಸಲು ಟವೆಲ್ ಕೊಟಿದ್ದಾರೆ ನಂತರ ನಾನು ಚಾಸಾ-8 ರವರನ್ನು ಕರೆದಿದ್ದು ಅವರು ಬಂದು ನನ್ನನ್ನು ಮತ್ತು ಚಾಸಾ-2 ರವರು ಕಳಸಾದ ಸರ್ಕಾರಿ ಆಸ್ಪತ್ರೆಗೆ ಆಟೋದಲ್ಲಿ ಕಳುಹಿಸಿದರು. ಕಳಸಾಗೆ ಬಂದು ನಾನು ಪೋಲಿಸರಿಗೆ ದೂರು ನೀಡಿದ್ದೇನೆ. ಆನಂತರ ಆ್ಯಂಬುಲೆನ್ಸ್ ನಿಂದ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಾಸಾ-2 ರವರಿಗೆ ಚಿಕಿತ್ಸೆ ಕೊಡಿಸಿದೆವು. ಆಸ್ಪತ್ರೆಯಲ್ಲಿ ನಾವು 11 ದಿನ ಇದ್ದು ಚಾಸಾ-2 ರವರ ಹಲ್ಲುಗಳನ್ನು ತೆಗೆದು ಹಾಕಿದ್ದಾರೆ.

ಆಸ್ಪತ್ರೆಯಿಂದ ಬಂದ 2-3 ದಿನಗಳಲ್ಲಿ ಪೋಲಿಸರು ಬಂದು ಕೃತ್ಯ ನಡೆದ ಸ್ಥಳವನ್ನು ತೋರಿಸುವಂತೆ ಕೇಳಿದ್ದು ನಾನು ಸ್ಥಳವನ್ನು ತೋರಿಸಿದ್ದೇನೆ. ಆಸ್ಪತ್ರೆಯಲ್ಲಿರುವಾಗ ಪೋಲಿಸರು ಚಾಸಾ-2 ರವರ ಬಟ್ಟೆ ಮತ್ತು ರಕ್ತದ ಮಾದರಿಯನ್ನು ಪಡೆದುಕೊಂಡು ಹೋಗಿದ್ದಾರೆ. ಸಾಕ್ಷಿಯು ದಿ.27.11.2022 ರ ದೂರು, ದಿ.08.12.2022 ರ ಸ್ಥಳ ಮಹಜರ್ ನಲ್ಲಿ ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿರುತ್ತಾರೆ. ದೂರನ್ನು ನಿಪಿ-1, ಮಹಜರ್ ನ್ನು ನಿಪಿ-2, ಸಾಕ್ಷಿಯ ಎಡಗೈ ಹೆಬ್ಬೆಟ್ಟಿನ ಗುರುತುಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಭಾವಚಿತ್ರದಲ್ಲಿ ತಾವು ಇರುವ ಬಗ್ಗೆ ಗುರುತಿಸಿ ಸದರಿ ಭಾವಚಿತ್ರವನ್ನು ತಾವು ಪೋಲಿಸರಿಗೆ ಕೃತ್ಯ ನಡೆದಿರುವ ಸ್ಥಳ ತೋರಿಸುವಾಗ ತೆಗೆದಿದೆ ಹಾಗೂ ಅದೇ ಸ್ಥಳದಲ್ಲಿ ಮಹಜರ್ ಗೆ ಹೆಬ್ಬೆಟ್ಟು ಹಾಕಿರುವುದಾಗಿ ನುಡಿಯುತ್ತಾರೆ. ಭಾವಚಿತ್ರವನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ದಿನಾಂಕ ಮತ್ತು ಸಮಯ ಹೇಳದ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು ಪ್ರಾಜ್ಞ್ಯಾ ಸ.ಸ.ಅ. ರವರಿಂದಃ</u>**

ದಿ.27.11.2022 ರಂದು ಸ.5.00 ಗಂಟೆ ಸಮಯದಲ್ಲಿ ಗಲಾಟೆಯಾಗಿದೆ ಎಂದರೆ ಸರಿ. ಅದೇದಿನ ಸ.7.00 ಗಂಟೆ ಸಮಯಕ್ಕೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿ. ಚಾಸಾ-2 ರವರು ಬಗ್ಗಿ ನೀರು ಹಿಡಿಯುವಾಗ ಆರೋಪಿ ತಲೆಗೆ ಹೊಡೆದ ಕಾರಣ ಅವರು ಕಿರುಚಿದ್ದು ಅದನ್ನು ಕೇಳಿ ನಾನು ಸ್ದಳಕ್ಕೆ ಹೋದೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಚಾಸಾ-2 ರವರ ಮುಖದಲ್ಲಿ ರಕ್ತ ನೋಡಿ ಕಿರುಚಾಡಿದ್ದು ಚಾಸಾ-7 ರವರು ಬಂದು ಜಗಳ ಬಿಡಿಸಿದ್ದಾರೆ ಎಂದರೆ ಸರಿ.

ದಿ.08.12.2022 ರಂದು ಬೆ.11.00 ಗಂಟೆ ಸಮಯಕ್ಕೆ ಪೋಲಿಸರು ಸ್ಥಳ ಮಹಜರ್ ಗೆ ಸ್ಥಳ ತೋರಿಸುವಂತೆ ಕೇಳಿದ್ದರು ಎಂದರೆ ಸರಿ. ಆ ಸ್ಥಳದಲ್ಲಿ ಚಾಸಾ-3 ಮತ್ತು 4 ರವರು ನನ್ನೊಂದಿಗೆ ಸಹಿ ಮಾಡಿದ್ದಾರೆ ಎಂದರೆ ಸರಿ. ಚಾಸಾ-2 ರವರಿಗೆ ಹಲ್ಲೆ ಮಾಡಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯೇ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ</u>**

ಚಾಸಾ-2 ರವರಿಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳಲಾದ ದಿನಾಂಕ ನನಗೆ ಗೊತ್ತಿಲ್ಲ ಎಂದರೆ ಸರಿ. ಗಲಾಟೆಯಾಗಿದೆ ಎಂದು ಹೇಳುವ ಸಮಯಕ್ಕೆ ನಾನು ನನ್ನ ಮನೆಯಲ್ಲಿ ಇದ್ದೆ. ನಮ್ಮ ಮನೆಗೆ ಚಾಸಾ-2 ರವರು ನೀರು ಹಿಡಿಯಲು ಹೋಗಿದ್ದ ಸ್ಥಳಕ್ಕೂ ಸುಮಾರು 100 ಮೀಟರ್ ನಷ್ಟು ಅಂತರ ಇತ್ತು ಎಂದರೆ ಸರಿ. ನಾವು ವಾಸವಿರುವ ಲೈನ್ ನಿಂದ ಚಾಸಾ-8 ರವರ ಮನೆಗೆ ಸಮಾರು 200 ಮೀಟರ್ ನಷ್ಟು ಅಂತರ ಇದೆ. ಚಾಸಾ-3 ರವರ ಮನೆ ನಮ್ಮ ಮನೆಯ ಬಳಿಯೇ ಇದೆ ಎಂದರೆ ಸರಿಯಲ್ಲ. ಚಾಸ್ತಾ-3 ರವರ ಅಂಗಡಿಯ ಬಳಿ ನಿಂತುಕೊಂಡರೆ ಕೃತ್ಯ ನಡೆದಿದೆ ಎಂದು ಹೇಳಲಾದ ಸ್ದಳ ಕಾಣುತ್ತದೆ ಎಂದರೆ ಸಾಕ್ಷಿಯು ಇಲ್ಲ ಮತ್ತೊಂದು ಕೂಲಿ ಲೈನ್ ಅಡ್ಡ ಇದೆ ಎಂದು ನುಡಿಯುತ್ತಾರೆ.

ನಾನು ಹೇಳಿದ ದಿನಾಂಕದಂದು ಚಾಸಾ-2 ರವರು ಬಿಂದಿಗೆ ಹಿಡಿದುಕೊಂಡು ನೀರು ತರಲು ಹೋಗಿದ್ದರು. ನಾನು ಯಾವುದೇ ಬಿಂದಿಗೆಯನ್ನು ಪೋಲಿಸರಿಗೆ ಕೊಟ್ಟಿಲ್ಲ. ನಾನು ಸ್ಥಳಕ್ಕೆ ಹೋದಾಗ ಚಾಸಾ-2 ರವರಿಗೆ ಪೆಟ್ಟಾಗಿ 5 ನಿಮಿಷಗಳ ಕಾಲ ಆಗಿತ್ತು. ನಾನು ಸ್ದಳಕ್ಕೆ ಹೋದಾಗ ಚಾಸಾ-2 ರವರು

ನೆಲಕ್ಕೆ ಬಿದ್ದಿದ್ದರು. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಂಗಡಿ ಮುಂದಿನ ತಿರುವಿನಲ್ಲಿ ಓಡಿಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ ಮತ್ತು ಚಾಸಾ-2 ರವರು ಚಾಸಾ-8 ರವರ ಬಳಿಯೇ ಕೆಲಸ ಮಾಡುತ್ತಾರೆ ಎಂದರೆ ಸರಿ. ಚಾಸಾ-2 ರವರು ಮರ ಮತ್ತು ಗಿಡಗಳನ್ನು ಕಸಿ ಮಾಡುವ ಕೆಲಸ ಮಾಡುತ್ತಾರೆ ಎಂದರೆ ಸರಿ. ಚಾಸಾ-7 ರವರು ಆರೋಪಿಯಿಂದ ಕತ್ತಿ ಕಿತ್ತು ಬಿಸಾಡಿದ್ದಾರೆ.

ಆಸ್ಪತ್ರೆಗೆ ಹೋಗಿದ್ದ ಆಟೋ ಯಾರದು ಎಂದು ನನಗೆ ಹೇಳಲು ಆಗುವುದಿಲ್ಲ. ಆ ದಿನ ಸ.7.00 ರಿಂದ 7.15 ಗಂಟೆ ಸಮಯಕ್ಕೆ ನಾನು ಮತ್ತು ಚಾಸಾ-2 ಇಬ್ಬರೇ ಆಸ್ಪತ್ರೆಗೆ ಹೋಗಿದ್ದೆವು. ಆಸ್ಪತ್ರೆಯಲ್ಲಿ ಯಾರಿಂದ ಗಾಯವಾಗಿದೆ ಎಂದು ಹೇಳಿ ಬರೆಸಿಲ್ಲ. ಚಾಸಾ-2 ರವರೊಂದಿಗೆ ನಾನು ಹೋಗಿರುವ ಬಗ್ಗೆ ವೈದ್ಯರಿಗೆ ನಾನು ಹೇಳಿದ್ದೇನೆ. ಚಿಕಿತ್ಸೆ ಕೊಡುವಷ್ಟರಲ್ಲಿ ರಾ.9.00 ಗಂಟೆಯಾಗಿತ್ತು. ಆ ದಿನ ರಾತ್ರಿ ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿಯೇ ಇದ್ದೆವು. ಕಳಸ ಆಸ್ಪತ್ರೆಯಿಂದ ಹೊರಟಾಗ ರಾತ್ರಿ ಸಮಾರು 8.00 ಗಂಟೆಯಾಗಿರಬಹುದು. ಕಳಸದಿಂದ ನೇರವಾಗಿ ಚಿಕ್ಕಮಗಳೂರಿಗೆ ಹೋಗಿದ್ದೇವೆ ಎಂದರೆ ಸರಿ. ಚಿಕ್ಕಮಗಳೂರಿನಿಂದ 11 ದಿನಗಳ ನಂತರ ನಾವು ವಾಪಸ್ಸಾದೆವು. ಆ ದಿನ ಮೊದಲು ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿ ನಂತರ ಕಳಸ ಆಸ್ಪತ್ರೆಗೆ ಹೋದೆವು. ದೂರು ನೀಡುವಾಗ ಸಂಜೆ 7.00 ಗಂಟೆಯಾಗಿಬಹುದು. ದೂರನ್ನು ನಾನು ನೀಡಿದ್ದೇನೆ. ದೂರನ್ನು ಪೋಲಿಸರು ಬರೆದಿದ್ದಾರೆ. ದೂರನ್ನು ನಾನು ಓದಿಸಿಕೊಂಡು ಕೇಳಿಲ್ಲ.

ನಿಪಿ-1 ರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯ ಎಂದರೆ ಸರಿ. ದೂರನಲ್ಲಿ ಏನು ಬರೆದಿದೆ ಎಂದು ಕೇಳಲು ಪ್ರಯತ್ನಿಸಿಲ್ಲ. ಪೊಲಿಸರು ದೂರಿನಲ್ಲಿ ಏನಿದೆ ಎಂದು ಹೇಳಿಲ್ಲ. ಆ ದಿನ ಪೋಲಿಸರು ನಮ್ಮ ಜೊತೆಗೆ ಆಸ್ಪತ್ರೆಗೆ ಬರಲಿಲ್ಲ. ಪೋಲಸರು ಸ್ಥಳಕ್ಕೆ ಯಾವ ದಿನಾಂಕ ಮತ್ತು ಯಾವ ದಿನ ಬಂದಿದ್ದರು ಎಂದು ನನ್ನಿಂದ ಹೇಳಲು ಆಗುವುದಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-3 ರಲ್ಲಿ ನಲ್ಲಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-3 ನ್ನು ಯಾವ ವಿಚಾರಕ್ಕೆ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ-2 ಮತ್ತು ಆರೋಪಿ ಒಬ್ಬರಿಗೊಬ್ಬರು ಮಾತನಾಡುತ್ತಿದ್ದರು ಆದರೆ ಗಲಾಟೆಯಾದ ನಂತರ ಇಲ್ಲ.

ಚಾಸಾ-8 ರವರ ತೋಟದಲ್ಲಿ ಕೆಲಸ ಮಾಡುವ ವಿಚಾರಕ್ಕೆ ಚಾಸಾ-2 ಹಾಗೂ ಆರೋಪಿಯ ನಡುವೆ ಆಗಾಗ್ಗೆ ಜಗಳವಾಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ತಮಾಷೆಗೆ ಮಾತನಾಡುತ್ತಿದ್ದರು ಎಂದು ನುಡಿಯುತ್ತಾರೆ. ಮರ ಕಸಿ ಮಾಡುವವರು ಏಣಿ ಹಾಕಿಕೊಂಡು ಮಾಡುತ್ತಾರೆ ಎಂದರೆ ಸಾಕ್ಷಿಯು ಆಗಾಗ ಮಾಡುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-2 ರವರು ಮರ ಕಸಿ ಮಾಡುವ ಸಮಯದಲ್ಲಿ ಏಣಿಯಿಂದ ಮುಖ ಅಡಿಯಾಗಿ ಬಿದ್ದು ಗಾಯಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಚಾಸಾ-2 ಮತ್ತು ಆರೋಪಿ ತಮಾಷೆಗಾಗಿ ಮಾತನಾಡಿಕೊಳ್ಳುತ್ತಿದ್ದಾಗ ಆರೋಪಿ ಜೋರು ಮಾಡಿದ ಕಾರಣ ಅವರ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಘಟನೆ ನಡೆದಿದ್ದರೆ ನಿಪಿ-1 ರಲ್ಲಿ ಅದೇ ಬರೆಸುತ್ತಿದ್ದೆ ಎಂದರೆ ಸರಿ.

ನಾನು ಹೇಳಿದಂತೆ ಆರೋಪಿ ಚಾಸಾ-2 ರವರಿಗೆ ಕತ್ತಿಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರು ಮರ ಕಸಿ ಮಾಡುವಾಗ ಬಿದ್ದು ಏಟು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ-2 ರವರು ನೀರು ಹಿಡಿಯಲು ಹೋಗಿದ್ದ ವಿಚಾರ ಅಲ್ಲಿ ಆರೋಪಿ ಹಲ್ಲೆ ಮಾಡಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.